"The bye-laws of a mutli state co-operative society may provide for the nomination of persons in excess of the limits prescribed under sub-section(1)"

ನಮ್ಮದು ಹೊಸದೇನಲ್ಲ. ಇನ್ನೂ ಹೇಳುವುದಾದರೆ ರಾಷ್ಟ್ರಮಟ್ಟದಲ್ಲಿ ನಫೆಡ್, ಕ್ರಿಬ್ಕೋ ಮತ್ತು ಇಫ್ಕೋ ಈ ಮೂರು ಸಂಸ್ಥೆಗಳಿಗೆ ನಾಮಿನೇಟೆಡ್ ಡೈರೆಕ್ಟರ್ಸ್ ಮಾಡಿ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಇದನ್ನು ಗಮನದಲ್ಲಿಟ್ಟು ಕೊಂಡಾಗ ನಾವು ಮಾಡುವುದು ಹೊಸದೇನಲ್ಲ. ಸೋತವರಿಗೆ ಕೊಟ್ಟಿದ್ದೇವೆಂದು ಮಾನ್ಯ ಸದಸ್ಯರು ಹೇಳಿದರಂ. ಕೆಲವರಿಗೆ ಕೊಟ್ಟಿದ್ದೇವೆ. ರಾಜಕೀಯ ಇಲ್ಲ ವೆಂದು ಅಲ್ಲ. ರಾಜಕೀಯ ಇದೆ ಎಂಬುದನ್ನು ಹಿಂದೆ ಕೂಡ ಒಪ್ಪಿಕೊಂಡಿದ್ದೇನೆ. ಆದರಲ್ಲಿ ಹಿಂದಂ ಮುಂದು ನೋಡುವು ದಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್ —ರಾಜಕೀಯ ಇರಲಿ. ನಿಮ್ಮಲ್ಲಿ ಬೇಕಾದವರು ಸಿಗದಿದ್ದರೆ ಅಂಥ ವರನ್ನು ನೇಮಿಸಿ. ಚಂದ್ರಾರಾವ್ ಪಾಟೀಲ್ ಚಿಂಚೋಳಿ ಅವರನ್ನು ಗುಲ್ಬರ್ಗ ಸೆಂಟ್ರಲ್ ಬ್ಯಾಂಕಿನ ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಅವರು,[ಈ ಪ್ರಶ್ನೆ ಕೇಳಿರತಕ್ಕ ಸದಸ್ಯರಿಗೆ ಸೋತವರು ಸೋತವರು ಅಷ್ಟೇ ಅಲ್ಲ, ಚಿಂಚೋಳಿ ಟಿವಿಸಿಸಿಎಂಎಸ್.ನಲ್ಲಿ ಡಿಫಾಲ್ಟರ್ ಆಗಿದ್ದರು. ಸೋತಿದ್ದರೂ ಪರವಾಗಿಲ್ಲ, ಡಿಫಾಲ್ಟರ್ ಮಾತ್ರ ಆಗಿರಬಾರದು. ಅವರ ಬಗ್ಗೆ ಚುನಾವಣಾಧಿಕಾರಿಗಳು ಓವರ್ ರೂಲ್ ಮಾಡಿದ್ದಾರೆಂದು ಆಕ್ಷೇಪಣೆ ಮಾಡಿದರೂ ಅವರನ್ನು ಆ ಬ್ಯಾಂಕಿನ ಅಧ್ಯಕ್ಷರನ್ನಾಗಿ ನೇಮಿಸುವುದಕ್ಕೆ ನಿಮಗೆ ಯಾವ ಅಧಿಕಾರ ಇದೆ ?

ಶ್ರೀ ಆರ್. ಎಲ್. ಜಾಲಪ್ಪ —ಇವರ ಎದುರು ನಿಂತು ಸೋತರುಎಂದರೆ ಡಿಸ್‌ಕ್ವಾಲಿಫಿಕೇಷನ್ ಆಗುವುದಿಲ್ಲ. ಬ್ಯಾಂಕಿನ ಚುನಾವಣೆಯಲ್ಲಿ ಸೋತಿದ್ದರೆ ಡೈರೆಕ್ಟರನ್ನಾಗಿ ಮಾಡುವುದಕ್ಕೆ ಬರುವುದಿಲ್ಲ. ಡೀಫಾಲ್ಟರನ್ನು ನಾಮಿನೇಟ್ ಮಾಡಿದ್ದಾರೆಂದು ಹೇಳಿದ್ದಾರೆ. ಆ ಬಗ್ಗೆ ಡೆಪ್ಯೂಟಿ ರಿಜಿಸ್ಟ್ರಾರ್‌ರವರಿಗೆ ೩ ಸಾರಿ ಮೂರುತರಹ ಬರೆದ, ಕಳುಹಿಸಿದ್ದೇನೆ. ಡೀಫಾಲ್ಟರ್ ಇದ್ದರೆ ರಿಮೂವ್ ಮಾಡಿ ಎಂದು ಹೇಳಿದ್ದೇನೆ. ಇನ್ನು ೨-೩ ದಿನಗಳಲ್ಲಿ ಇದನ್ನು ನೋಡಿ ಇನ್ನೂ ಅವರು ಡೀಫಾಲ್ಟರ್ ಆಗಿದ್ದರೆ ಖಂಡಿತ ಅವರನ್ನು ಆ ಸ್ಥಾನದಿಂದ ತೆಗೆದುಹಾಕಿಸುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್. —ಇನ್ನೂ ಡೀಫಾಲ್ಟರ್ ಆಗಿದ್ದರೆ ಎಂಬುದು ಅಲ್ಲ. ಮಂತ್ರಿಗಳಿಂದ ಆದೇಶ ಹೋದಮೇಲೆ ಅವರ ಕಡೆಯಿಂದ ಹಣ ತುಂಬಿಸಿಕೊಂಡಿದ್ದಾರೆ. ಅವರಂ ಹಣ ತುಂಬಿರುವುದಂ ದೊಡ್ಡ ಮಾತಲ್ಲ. At the time of the election ಚುನಾವಣೆ ಸಂದರ್ಭದಲ್ಲಿ ಅವರು ಡೀಫಾಲ್ಟರ್ ಆಗಿದ್ದರು ಎಂಬುದು ಖಾತ್ರಿಯಾದರೆ ಅವರನ್ನು ತೆಗೆದಂ ಬೇರೆ ನಿಮ್ಮವರನ್ನೇ ನೇಮಿಸಿ. ನಾವು ಬೇಡ ಅನ್ನುವುದಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಆಗಬಹುದಂ.

ಅಧ್ಯಕ್ಷರು.—ಡಿಸ್‌ಕ್ವಾಲಿಫೈಡ್ ಆದಂತಹ ಅಭ್ಯರ್ಥಿಗಳನ್ನು ನಾಮಿನೇಟ್ ಮಾಡಬಾರದು.

ರೆಗ್ಯುಲೇಟೆಡ್ ಮಾರ್ಕೆಟ್ ಸಮಿತಿಗಳಿಗೆ ಸಂಬಂಧಿಸಿದ ಹಣದ ವೆಚ್ಚದ ಬಗ್ಗೆ.

೯೬೬. ಶ್ರೀ ಮಲ್ಲಾರ ಗೌಡ ಎಸ್. ಪಾಟೀಲ್ (ಸಂಕೇಶ್ವರ),—ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ರೆಗ್ಯುಲೇಟೆಡ್ ಮಾರ್ಕೆಟ್ ಸಮಿತಿಗಳಿಗೆ ಸಂಬಂಧಿಸಿದ ಹಣವನ್ನು ಉದ್ದೇಶಿತ ಬಾಬಿಗೆ ಖರ್ಚು ಮಾಡದೆ ಇತರೆ ಬಾಬುಗಳಿಗೆ ಹಣವನ್ನು ವರ್ಗಾವಣೆ ಮಾಡಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಆ ರೀತಿ ವರ್ಗಾವಣೆ ಮಾಡಿರುವ ಹಣವೆಷ್ಟು ?

ಇ) ಈ ವರ್ಗಾವಣೆಗೆ ಸರ್ಕಾರದವರು ಆದೇಶವನ್ನೇನಾದರೂ ನೀಡಿರುವರೇ ?

ಈ) ಹಾಗಿದ್ದಲ್ಲಿ ವರ್ಗಾವಣೆ ಮಾಡಲಂತಹ ಸಂದರ್ಭಗಳೇನು ?

ಶ್ರೀ ಆರ್. ಎಲ್. (ಜಾಲಪ್ಪ ಸಹಕಾರ ಸಚಿವರು).—

ಅ) ನಿಯಂತ್ರಿತ ಮಾರುಕಟ್ಟೆ ಸಮಿತಿಗಳಿಗೆ ಸಂಬಂಧಿಸಿದ ಹಣವನ್ನು ಬ್ಯಾಂಕ್‌ಗಳಲ್ಲಿ ಸರ್ಕಾರದ ಖಜಾನೆಗಳು. ಅಂಚೆ ಕಛೇರಿ ಉಳಿತಾಯ ಬ್ಯಾಂಕುಗಳು ಮತ್ತು ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟುಗಳಲ್ಲಿ ಅವುಗಳ ಸ್ವಂತ ಖಾತೆಗಳಲ್ಲಿ ಇಡಲಾಗಿದೆ.

ಆ) ಉದ್ಭವಿಸುವುದಿಲ್ಲ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಆದರೆ ಯಾವ ಯಾವ ಬ್ಯಾಂಕುಗಳಲ್ಲಿ ಎಷ್ಟೆಷ್ಟು ಹಣವನ್ನು ಇಟ್ಟಿದ್ದಾರೆಂದು ಹೇಳಲಿಲ್ಲ. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಎಷ್ಟು ಹಣ ಇಟ್ಟಿದ್ದೀರಿ ? ನಮ್ಮ ಸಹಕಾರ ಬ್ಯಾಂಕುಗಳಲ್ಲಿ ಎಷ್ಟು ಹಣ ಇಟ್ಟಿದ್ದೀರಿ ? ಅಂಚೆ ಕಛೇರಿಯಲ್ಲಿ ಎಷ್ಟು ಹಣ ಇಟ್ಟಿದ್ದೀರಿ ? ಹಣ ಇಟ್ಟ ಮೇಲೆ ಲೋಕಲ್ ಕಮಿಟಿ ಮೇಲೆ ಒತ್ತಡ ತಂದು ಕೆಲವೊಂದು ಮಾರ್ಕೆಟ್ ಕಮಿಟಿಯವರು ಬೇರೆ ಕಮಿಟಿಗಳಿಗೆ ದೇಣಿಗೆ ಕೊಡತಕ್ಕ ಕಾರ್ಯಕ್ರಮ ನಡೆದಿದೆ. ಅದರ ಮೇಲೆ ಏನು ಹತೋಟಿ ಇದೆ ?

ಶ್ರೀ ಆರ್. ಎಲ್. ಜಾಲಪ್ಪ.—ಯಾವ್ಯಾವ ಬ್ಯಾಂಕುಗಳಲ್ಲಿ ಎಷ್ಟೆಷ್ಟು ಹಣ ಇದೆ ಎಂದು ಗೊತ್ತಿಲ್ಲ. ಒಟ್ಟು ೨೨೫೪ ಲಕ್ಷ ರೂಪಾಯಿಗಳ ಹಣ ಬ್ಯಾಂಕಿನಲ್ಲಿದೆ. ಮೋಜರ್ ಪೋರ್ಡನ್ ಸಹಕಾರಿ ಬ್ಯಾಂಕುಗಳಲ್ಲಿದೆ. ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟ್‌ಗಳಲ್ಲಿ ೪೭.೭೦ ಲಕ್ಷ ರೂಪಾಯಿಗಳ ಇದೆ. ಅಂಚೆ ಕಛೇರಿಯಲ್ಲಿ ೬೧೯ ಲಕ್ಷ ೭೩ ಸಾವಿರ ರೂಪಾಯಿಗಳು ಇದೆ. ಇದರ ಮೇಲೆ ಒತ್ತಡ ತಂದು ಬೇರೆ ಯಾರಿಗೂ ದೇಣಿಗೆ ಕೊಡುತ್ತಿಲ್ಲ. ಇತ್ತೀಚೆಗೆ ಎಪಿಎಂಸಿ.ಯವರು ಕಾಗದ ಬರೆದರು, ನಮ್ಮಲ್ಲಿ ಹಣ ಇದೆ ಇದನ್ನು ಕ್ಷಾಮ ಪರಿಹಾರ ನಿಧಿಗೆ ಕೊಡುವುದಕ್ಕೆ ಅನುಮತಿ ಕೊಡಿ ಎಂದು ಕೇಳಿದ್ದಾರೆ. ಅದಕ್ಕೆ ಅನುಮತಿ ಕೊಡುತ್ತಿದ್ದೇವೆ. ಈ ದಿಸೆಯಲ್ಲಿ ಒಂದು ತಿದ್ದುಪಡಿಯನ್ನು ಕೂಡ ತರಲಿತ್ತಿದ್ದೇವೆ, ರಾಷ್ಟ್ರದ ಹಿತಕ್ಕೆ ಧಕ್ಕೆ ಬಂದಾಗ ಇಂಟರ್ನಲ್ ಅಥವಾ ಎಕ್ಸ್‌ಟರ್ನಲ್ ಏನಾದರೂ ಇದ್ದರೆ ಅದಕ್ಕೆ ಸರ್ಕಾರದ ಅನುಮತಿ ತೆಗೆದುಕೊಂಡು ಕಾಂಟ್ರಿಬ್ಯೂಟ್ ಮಾಡಬೇಕೆಂದು ಮಾಡುತ್ತೀದ್ದೇವೆ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ನನ್ನ ಅಭಿಪ್ರಾಯದ ಪ್ರಕಾರ ರಾಜ್ಯ ಮಟ್ಟದಲ್ಲಿ ಅಗ್ರಿಕಲ್ಚರಲ್ ಮಾರ್ಕೆಟಿಂಗ್ ಬ್ಯಾಂಕ್ ಎಂದು ಮಾಡಿ ಅಲ್ಲಿ ಮಾರ್ಕೆಟಿಂಗ್ ಕಮಿಟಿಯ ಹಣವನ್ನು ಏಕೆ ತೊಡಗಿಸಬಾರದು ? ಇದರಿಂದ ರೈತರಿಗೆ ಅನುಕೂಲವಾಗುತ್ತದೆ. ಈ ಹಣವನ್ನು ಆ ಬ್ಯಾಂಕಿಗೆ ಹಾಕಿ ಹೊಸದಾಗಿ ಒಂದು ಒಳ್ಳೆಯ ಆಡಳಿತ ಯಂತ್ರವನ್ನು ಏಕೆ ನಿರ್ಮಾಣ ಮಾಡಬಾರದು ?

ಶ್ರೀ ಆರ್. ಎಲ್. ಜಾಲಪ್ಪ.—ಈ ಹಣ ನಮ್ಮಲ್ಲಿ ಖಾಯಂ ಆಗಿರುವುದಿಲ್ಲ. ಅಭಿವೃದ್ಧಿ ಕಾರ್ಯಗಳಿಗೋಸ್ಕರ ಅದನ್ನು ತೆಗೆದುಕೊಂಡಿದ್ದೇವೆ. ಮೂರು ವರ್ಷಗಳಲ್ಲಿ ಎಂದರೆ ೮೫-೮೪ ೮೪-೮೫ ೮೫-೮೬ರಲ್ಲಿ ೧೩ ಕೋಟಿ ರೂಪಾಯಿಗಳನ್ನು ಅಭಿವೃದ್ಧಿ ಕಾರ್ಯಗಳಿಗೋಸ್ಕರ ತೆಗೆದುಕೊಂಡಿದ್ದೇವೆ. ಮಾರ್ಕೆಟ್ ಯಾರ್ಡ್‌ಗಳು ಡೆವಲಪಮೆಂಟ್ ಆಗಬೇಕಾಗಿದೆ. ಆ ಹಣ ಡಿಪಾಸಿಟ್ ಹಣ ಅಲ್ಲ, ಅಭಿವೃದ್ಧಿ ಕಾರ್ಯಗಳಿಗಾಗಿ ಉಪಯೋಗಿಸತಕ್ಕದ್ದು. ಆದ್ದರಿಂದ ಅದನ್ನು ಬ್ಯಾಂಕಿನಲ್ಲಿಡುವುದಕ್ಕೆ ಆಗುವುದಿಲ್ಲ. ಅದಕ್ಕೋಸ್ಕರ ಒಂದು ಬ್ಯಾಂಕನ್ನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಮಾರ್ಕೆಟ್‌ಯಾರ್ಡ್‌ನಿಂದ ಮಧ್ಯವರ್ತಿಗಳನ್ನು ತೆಗೆಯುತ್ತೇವೆಂದು ಮಂತ್ರಿಗಳು ಹಲವಾರು ಸಾರಿ ಹೇಳಿದ್ದಾರೆ. ಮಧ್ಯವರ್ತಿಗಳನ್ನು ತೆಗೆಯಬೇಕಾದರೆ ಅಗ್ರಿಕಲ್ಚರಲ್ ಮಾರ್ಕೆಟಿಂಗ್ ಬ್ಯಾಂಕ್ ಮಾಡಿದರೆ ಮಾತ್ರ ಸಾಧ್ಯ. ನಿಮ್ಮ ಹಣ ಎಷ್ಟಿದೆ ಅದನ್ನು ಅಗ್ರಿಕಲ್ಚರಲ್ ಮಾರ್ಕೆಟಿಂಗ್ ಬ್ಯಾಂಕಿನಲ್ಲಿ ಹಾಕಿದರೆ ಒಳ್ಳೆಯದು. ಆ ದೃಷ್ಟಿಯಿಂದ ಅದನ್ನು ಮಾಡುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.—ಬ್ಯಾಂಕು ಮಾಡುವುದರಿಂದ ಮಧ್ಯವರ್ತಿಗಳನ್ನು ತೆಗೆಯಂವುದಕ್ಕಾಗುವುದಿಲ್ಲ. ಅವರ ಉದ್ದೇಶ ಏನೆಂದರೆ ಒಂದು ಸಮಯ ವ್ಯಾಪಾರ ಆಗದಿದ್ದಾಗ ರೈತರಿಗೆ

ಅಡ್ವಾನ್ಸ್ ಕೊಡಬಹುದೆಂದು. ಅದಕ್ಕೆ ಬೇಕಾದರೆ ಬೇರೆ ವ್ಯವಸ್ಥೆ ಮಾಡಬಹುದು, ಅದಕ್ಕೆ ಅವಕಾಶ ಇದೆ. ಸೆಂಟ್ರಲ್ ವೇರ್‌ಹೌಸಿಂಗ್ ಕಾರ್ಪೊರೇಷನ್ನಿನವರು ಎಲ್ಲಾ ಮಾರ್ಕೆಟ್ ಯಾರ್ಡ್‌ಗಳಲ್ಲಿ ಗೋಡೌನ್ ಕಟ್ಟುವುದಕ್ಕೆ ಹಣ ಕೊಟ್ಟಿದ್ದಾರೆ. ಅವರಿಗೆ ಬೇಕಾದರೆ ಜಿಲ್ಲಾ ಬ್ಯಾಂಕುಗಳಲ್ಲಿ ಹಣ ಕೊಡಿಸಬಹುದು. ಸುಮಾರು ಸಿ.ಎ.ಎಲ್.ಡಿ.ಗಳು ಡೇ-ಟು-ಡೇ ವ್ಯವಹಾರ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಅವರಿಗೆ ಹಣ ಸಾಲುವುದಿಲ್ಲ. ಅಂಥ ಸಂಸ್ಥೆಗಳಿಗೆ ಹಣ ಸಹಾಯ ಮಾಡ ಬೇಕಾಗುತ್ತದೆ. ಆದ್ದರಿಂದ ತಾವು ಹೇಳಿದ ಬ್ಯಾಂಕನ್ನು ಮಾಡುವುದಕ್ಕಾಗುವುದಿಲ್ಲ. ಅದು ಸಾಧುವೂ ಅಲ್ಲ, ಸಾಧ್ಯವೂ ಇಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಮಂತ್ರಿಗಳು ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿ ವಿಷಯದಲ್ಲಿ ಹೇಳಿದರು. ಒಂದು ಮಾತು ನಿಜ, ರೈತಾಪಿಗೆ ಜನರಿಗೆ ಆಗಬೇಕಾದ ಕೆಲಸಗಳು ಅಲ್ಲಿ ಸರಿಯಾಗಿ ಆಗುವುದಿಲ್ಲ. ಅದಕ್ಕೆ ವಿಶೇಷವಾಗಿ ಹಣ ಖರ್ಚು ಮಾಡಬೇಕಾಗುತ್ತದೆ. ವ್ಯವಸಾಯ ಇಲಾಖೆಯಲ್ಲಿ ಹಣ ಕಡಿಮೆ ಇದೆ. ಎಲ್ಲೆಲ್ಲಿ ಸಾಧ್ಯತೆ ಇದೆ ಅಂಥ ಕಡೆ ನೀವು ರೀಸರ್ಚ್ ಮಾಡತಕ್ಕ ವ್ಯವಸ್ಥೆ ಮಾಡುವುದಕ್ಕೆ ಕಾನೂನನ್ನು ಸೂಕ್ತವಾಗಿ ತಿದ್ದುಪಡಿ ಮಾಡಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.—ಈಗಾಗಲೇ ಮಾರ್ಕೆಟಿಂಗ್ ಬೋರ್ಡ್ ಎಂದು ಏನಿದೆ ಅಲ್ಲಿ ರೀಸರ್ಚ್ ವ್ಯವಸ್ಥೆ ಮಾಡುತ್ತಿದ್ದೇವೆ, ಮತ್ತು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕೂಡ ರೀಸರ್ಚ್ ಗೋಸ್ಕರ ವ್ಯವಸ್ಥೆ ಮಾಡಿದ ಹಾಗೆ ಜ್ಞಾಪಕ. ಅದನ್ನು ತಿಳಿದು ಹೇಳುತ್ತೇನೆ. ಕೃಷಿ ವಿಶ್ವವಿದ್ಯಾನಿಲಯದವರು ಇಂಥ ಕಾರ್ಯಕ್ರಮ ತೆಗೆದುಕೊಂಡಿದ್ದರೆ ಮಾರ್ಕೆಟಿಂಗ್ ಬೋರ್ಡ್‌ನಿಂದ ಹಣ ಒದಗಿಸ ಬಹುದು. ಈ ಸಂದರ್ಭದಲ್ಲಿ, ಈ ವರ್ಷ ರಾಷ್ಟ್ರ ಮಟ್ಟದಲ್ಲಿ ಮಾರ್ಕೆಟಿಂಗ್ ವ್ಯವಸ್ಥೆಗೋಸ್ಕರ ನಮ್ಮ ರಾಜ್ಯಕ್ಕೆ ಎರಡನೆಯ ಬಹುಮಾನ ದೊರೆತಿದೆ ಎಂದು ಹೇಳಲು ಸಂತೋಷ ಪಡುತ್ತೇನೆ.

ಹೊಸದುರ್ಗ ತಾಲ್ಲೂಕಿನಲ್ಲಿನ ದೇವಪುರ ಅಮೃತ್‌ಮಹಲ್ ನಗಾರಿ ಕಾವಲಿನಲ್ಲಿ ಸಾಗುವಳಿಯ ಬಗ್ಗೆ.

೧೦೫. ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಹೊಸದುರ್ಗ ತಾಲ್ಲೂಕು ಮಾಡದಕೆರೆ ಹೋಬಳಿ ದೇವಪುರ ಅಮೃತ್ ಮಹಲ್ ನಗಾರಿ ಕಾವಲಿನಲ್ಲಿ ಸಾಗುವಳಿಗೆ ವಿಲೇ ಮಾಡಲು ಬಿಡುಗಡೆ ಮಾಡಿದ ಜಮೀನನ್ನು ಹಂಚಲಾಗಿದೆಯೇ,

ಆ) ಹಾಗಿದ್ದಲ್ಲಿ ಕಳೆದ ೧೦ ವರ್ಷಗಳಿಂದಲೂ ಈ ಪ್ರದೇಶದ ಬನಸಿಹಳ್ಳಿಯ ಬಡ ಭೂ ರಹಿತ ಹರಿಜನರು ಬಿಡುಗಡೆಯಾದ ೩೦ ಎಕರೆ ಜಾಗವನ್ನು ಬಗರ್ ಹುಕುಂ ಸಾಗುವಳಿ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಈ ಬಗರ್ ಹುಕುಂ ಸಾಗುವಳಿದಾರರಿಗೆ ಜಮೀನು ಖಾಯಂ ಮಾಡಲು ಸರ್ಕಾರದವರು ಉದ್ದೇಶಿಸಿದ್ದಾರೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ಹೊಸದುರ್ಗ ತಾಲ್ಲೂಕು ಮಾಡದಕೆರೆ ಹೋಬಳಿ ದೇವಪುರ ಅಮೃತ್ ಮಹಲ್ ನಗಾರಿ ಕಾವಲಿನಲ್ಲಿ ಬಿಡುಗಡೆಯಾದ ಜಮೀನನ್ನು ಸಾಗುವಳಿಗೆ ಹಂಚಲಾಗಿದೆ.

ಆ) ಬನಸಿಹಳ್ಳಿಯ ಬಡ ಭೂ ರಹಿತ ಹರಿಜನರು ಅಮೃತ್ ಮಹಲ್ ನಗಾರಿ ಕಾವಲಿನಲ್ಲಿ ಬಿಡುಗಡೆಯಾದ ಜಮೀನಿನ ಪೈಕಿ ೩೦ ಎಕರೆ ಪ್ರದೇಶದಲ್ಲಿ ಬಗರ್ ಹುಕುಂ ಸಾಗುವಳಿ ಮಾಡಿರುವುದಿಲ್ಲ.

ಇ) ಮೇಲಿನ "ಆ" ಪ್ರಶ್ನೆಯ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.